**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 6/2020 ಪಿ.ಡಬ್ಲ್ಯೂಃ 11

ಸಿ.ಡಬ್ಲ್ಯೂಃ 36

| | |
|---|---|
| ಸಾಕ್ಷಿದಾರರ ಹೆಸರು | ರವೀಂದ್ರ |
| ತಂದೆಯ ಹೆಸರು | ಶೇಷಯ್ಯ |
| ವಯಸ್ಸು | 43 ವರ್ಷ |
| ಉದ್ಯೋಗ | ಸಿ.ಹೆಚ್ ಸಿ 93, ಶಂಕರನಾರಾಯಣ ಪೊಲೀಸ್ ಠಾಣೆ |
| ವಿಳಾಸ | ಕೋಟೇಶ್ವರ, ಕುಂದಾಪುರ |

ದಿನಾಂಕಃ 15-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ದಿನಾಂಕ 02-02-2017 ರಿಂದ 23-09-2023 ರ ವರೆಗೆ ಕಾಪು ಪೊಲೀಸ್ ಠಾಣೆಯಲ್ಲಿ ಹೆಚ್ .ಸಿ .ಆಗಿ ಸೇವೆ ಸಲ್ಲಿಸಿದ್ದೇನೆ.

2) ದಿನಾಂಕ 21-06-2019 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಬೆಳಿಗ್ಗೆ 10.00 ಗಂಟೆಗೆ ಹಾಜರಾಗಿ ನೀಡಿದ ಲಿಖಿತ ದೂರು ನಿಶಾನೆ ಪಿ-6 ನ್ನು ಸ್ವೀಕರಿಸಿ, ಅದನ್ನು ಠಾಣಾ ಗುನ್ನೆ ನಂಬ್ರ 87/2019 ಕ್ಕೆ ದಾಖಲಿಸಿಕೊಂಡಿದ್ದೆನು. ಮೂಲ ವರ್ತಮಾನವನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿದೆ. ಆ ದಿನ ನಾನು ದಾಖಲಿಸಿದ ಪ್ರಥಮ ವರ್ತಮಾನವನ್ನು ಈಗ ನೋಡಿ ಅದನ್ನು ಈಗ **ನಿಶಾನೆ ಪಿ- 15** ಎಂದು ಗುರುತಿಸಿದ್ದೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ- 15(ಎ) ಎಂದು ಗುರುತಿಸಿದೆ. ನಿಪಿ-6 ರಲ್ಲಿರುವ ನನ್ನ ಸಹಿ ನಿಪಿ-6(ಬಿ) ಎಂದು ಗುರುತಿಸಿದ್ದೇನೆ. ನಂತರ ಮುಂದಿನ ತನಿಖೆಯನ್ನು ಚಾಸಾ -37 ಇವರಿಗೆ ವಹಿಸಿಕೊಟ್ಟಿದ್ದೆ.

**<u>ಪಾಟೀಸವಾಲುಃ ಶ್ರೀ ಎ.ಬಿ.ಹೆಚ್. ವಕೀಲರಿಂದ 3 ಮತ್ತು 4 ನೇ ಆರೋಪಿತರ ಪರವಾಗಿ</u>**

1) ನಿಶಾನೆ ಪಿ-6 ರ ಜಾಗೆ ಠಾಣೆಯಿಂದ ಸುಮಾರು 5 ಕಿ.ಮೀಗಳ ಅಂತರದಲ್ಲಿದೆ. ನಿಪಿ-6 ರೊಂದಿಗೆ ವಾಹನದ ಫೋಟೋ ನಿಶಾನೆ ಪಿ-9 ಕೊಟ್ಟಿಲ್ಲ. ನಿಪಿ-6 ರ ದೂರನ್ನು ನಾವೇ ಹೇಳಿ ಬರೆಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-6 ರ ಆಧಾರದ ಮೇಲೆ ಒಂದು ತಪ್ಪು ಮಾಹಿತಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ - ಇಲ್ಲ -</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ